**ಓ.ಎಸ್. 24/2023 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿಃ 10.01.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿರುತ್ತೇನೆ.**

ದಿನಾಂಕ 24.02.2018 ರಂದು ಮೃತ ಗೋಪಾಲಸ್ವಾಮಿ ನನಗೆ ಬರೆದುಕೊಟ್ಟ ಕ್ರಯದ ಕರಾರನ್ನು ಹಾಜರುಪಡಿಸಿದ್ದು ನಿಶಾನೆ ಪಿ 1 ಎಂದು, ದಿನಾಂಕ 19.09.2019 ರಂದು ಮೃತ ಗೋಪಾಲಸ್ವಾಮಿ ನನಗೆ ಬರೆದುಕೊಟ್ಟ ಕ್ರಯದ ಕರಾರನ್ನು ಹಾಜರುಪಡಿಸಿದ್ದು ನಿಶಾನೆ ಪಿ 2 ಎಂದು, ಗೋಪಾಲಸ್ವಾಮಿರವರ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ನಿ ಪಿ 3 ಎಂದು, ಪಹಣಿ ಪ್ರತಿಯನ್ನು ಹಾಜರುಪಡಿಸಿದ್ದು ನಿಶಾನೆ ಪಿ 4 ಎಂದು, ದಿನಾಂಕ 13.03.2023 ರಂದು ಪ್ರತಿವಾದಿಗಳಿಗೆ ನೀಡಿದ ನೋಟಿಸಿನ ಪ್ರತಿಯನ್ನು ಹಾಜರುಪಡಿಸಿದ್ದು ನಿಶಾನೆ ಪಿ 5 ಎಂದು, 4 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ ಪಿ 6 ಎಂದು, 3 ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ ಪಿ 7 ಎಂದು ಗುರುತಿಸಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಾಕಾಶ ಕೋರಿದ್ದು, ಮುಂದೂಡಲಾಯಿತು.)**

**(ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಎಂ.ಮಂಜುನಾಥ)**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು**
**ಪಾಂಡವಪುರ**